Pratham Mysore
Every Child in School and Learning Well

# ಪ್ರಜ್ಞಾನ ಪತ್ರಿಕೆ

**04-03-2023** **ಪ್ರಥಮ್ ಮೈಸೂರ್ ಪ್ರೇರಿತ** **ಸಂಚಿಕೆ-17**

## ವಾಷಿಂಗ್ ಸೋಡ







ವಾಷಿಂಗ್ ಸೋಡವು ಸೋಡಿಯಂ,ಕಾರ್ಬನ್ ಮತ್ತು ಆಕ್ಸಿಜನ್ ಎಂಬ ಮೂರು ಮೂಲವಸ್ತುಗಳಿಂದ ಮಾಡಲ್ಪಟ್ಟಿದ್ದು.ರಾಸಾಯನಿಕವಾಗಿ ಸೋಡಿಯಂ ಅಂದರೆ (Na ) ಮತ್ತು ಕಾರ್ಬೋನೇಟ್ ಅಂದರೆ (CO3 ) ಆಗಿ ವರ್ತಿಸುತ್ತದೆ. ಇದರ ರಾಸಾಯನಿಕ ಸಂಯೋಜನೆ Na2CO3 ಅಂದರೆ ಸೋಡಿಯಂಕಾರ್ಬೋನೇಟ್.

**ವಾಷಿಂಗ್ ಸೋಡ ಉಪಯೋಗಗಳು:-**

1). ವಾಷಿಂಗ್ ಸೋಡವು ಹೆಚ್ಚು ಕ್ಷಾರೀವಾಗಿರುವುದರಿಂದ ಕಲೆಗಳನ್ನು ತೆಗೆದುಹಾಕಲು ಕೈಗಾರಿಕೆ ಮತ್ತು ಮನೆಗಳನ್ನು ಸ್ವಚ್ಛಮಾಡಲು ಬಳಸುತ್ತಾರೆ.

2). ಬಟ್ಟೆಯನ್ನು, ಕಪ್ಪಾದ ಪಾತ್ರೆ ಮತ್ತು ಜಿಡ್ಡಿನಿಂದ ಕೂಡಿರುವ ಚಮಚ ಚಾಕು ಮುಂತಾದ ವಸ್ತುಗಳನ್ನು ಸ್ವಚ್ಛಗೊಳಿಸಲು ವಾಷಿಂಗ್ ಸೋಡವನ್ನು ಉಪಯೋಗಿಸುತ್ತೇವೆ .

3)._ಕಟ್ಟಿದ ಸಿಂಕ್ ಗೆ ವಾಷಿಂಗ್ ಸೋಡ ಜೊತೆ ಒಂದು ಲೋಟ ಬಿಸಿನೀರು ಹಾಕಿದಾಗ ಅದು ಸ್ವಚ್ಛವಾಗುತ್ತದೆ.

4).ನೆಲದ ಮೇಲಿರುವ ಜಿಡನ್ನ ಸ್ವಚ್ಛಗೊಳಿಸಲು, ಪಾಚಿ ಕಲೆ ಗಳನ್ನು ತೆಗೆಯಲು ಉಪಯೋಗಿಸುತ್ತೇವೆ.

**ನೀರಿನಲ್ಲಿ ವಾಷಿಂಗ್ ಸೋಡ ಕರಗಿದಾಗ ತಾಪ ಹೆಚ್ಚಾಗುವುದು – ಪ್ರಯೋಗ:-**





ಒಂದು ಲೋಟ ಸಾಧಾರಣ ನೀರಿಗೆ ಒಂದು ಚಮಚೆಯಷ್ಟು ವಾಷಿಂಗ್ ಸೋಡಾವನ್ನು ಸೇರಿಸಿದಾಗ ನೀರಿನ ತಾಪ ಹೆಚ್ಚಾಗಿರುವುದನ್ನು ಗ್ರಹಿಸಬಹುದು.

## ಬ್ಲೀಚಿಂಗ್ ಪೌಡರ್:-







ಬ್ಲೀಚಿಂಗ್ ಪೌಡರ್ ಕಾಲ್ಸಿಯಂ, ಕ್ಲೋರೈನ್ ಮತ್ತು ಆಕ್ಸಿಜನ್ ಎಂಬ ಮೂರು ಮೂಲವಸ್ತುವಿನಿಂದ ಮಾಡಲ್ಪಟ್ಟಿದೆ ರಾಸಾಯನಿಕವಾಗಿ ಕ್ಯಾಲ್ಸಿಯಂ ಅಂದರೆ (Ca) ಮತ್ತು ಹೈಪೋಕ್ಲೋರೈಟ್ ಅಂದರೆ (ClO ) ಆಗಿ ವರ್ತಿಸುತ್ತದೆ. ಇದರ ರಾಸಾಯನಿಕ ಸಂಯೋಜನೆ Ca(ClO)2 ಅಂದರೆ ಕ್ಯಾಲ್ಸಿಯಂ ಹೈಪೋಕ್ಲೋರೈಟ್.

**ಬ್ಲೀಚಿಂಗ್ ಪೌಡರ್ ಉಪಯೋಗಗಳು:-**

1) ಜವಳಿ ಉದ್ಯಮ ಅಂದರೆ ಬಟ್ಟೆ ತಯಾರಿಕೆಯಲ್ಲಿ ಬ್ಲೀಚಿಂಗ್ ಪೌಡರ್ ಬಳಸಲಾಗುತ್ತದೆ.

2) ನೆಲದಲ್ಲಿ ಅತಿಯಾದ ಕಲೆಗಳಿದ್ದರೆ ಸ್ವಚ್ಛಗೊಳಿಸಲು ಬಳಸುತ್ತೇವೆ.

**ಎಚ್ಚರಿಕೆ :-**

1.ವಾಷಿಂಗ್ ಸೋಡವನ್ನು ಬರಿಕೈಯಲ್ಲಿ ಮುಟ್ಟಬಾರದು .

2. ಬ್ಲೀಚಿಂಗ್ ಪೌಡರ್ ನನ್ನು ಬರಿ ಕೈಯಲ್ಲಿ ಮುಟ್ಟುವುದರಿಂದ ರಾಸಾಯನಿಕ ಕ್ರೀಯೆ ಉಂಟಾಗಿ ಕೈ ಚರ್ಮ ಸುಲಿದು ಬರುತ್ತದೆ.

**ಮಾರ್ಚ್ 8 ರಂದು ವಿಶ್ವ ಮಹಿಳಾ ದಿನಾಚರಣೆಯ ಪ್ರಯುಕ್ತ ಮಹಿಳಾ ವಿಜ್ಞಾನಿಗಳ ಹೆಸರು ಮತ್ತು ಕೊಡುಗೆಗಳ ಪರಿಚಯ:**

1.ರಜನಿ ಭಿಸೆ- ಕ್ಯಾನ್ಸರ್ ಸಂಶೋಧನೆಯಲ್ಲಿ ಗಮನಾರ್ಹ ವಿಜ್ಞಾನಿ.

2.ಟೆಸ್ಸಿ ಥಾಮಸ್- ಇವರು ಭಾರತದ ಕ್ಷಿಪಣಿ ಯೋಜನೆಯ ಮೊದಲ ಮಹಿಳಾ ನಿರ್ದೇಶಕರು.(missel women)

3.ಚಂದ್ರಿಮ ಷಹ- ಭಾರತೀಯ ಜೀವಶಾಸ್ತ್ರಜ್ಞೆ.

4. ರೋಹಿಣಿ ಗಾಡ್ಬೋಲೆ- ಕಣ ಭೌತಶಾಸ್ತ್ರಜ್ಞೆ.

5. ಶೋಭನಾ ಗೋಖಲೆ - ಶಾಸನಶಾಸ್ತ್ರಜ್ಞೆ ಮತ್ತು ನಾಣ್ಯಶಾಸ್ತ್ರಜ್ಞೆ.

**ಪ್ರಥಮ್ ಚಟುವಟಿಕೆ ಮತ್ತು ಸಂಪನ್ಮೂಲ ಕೇಂದ್ರ**

ಹಿರಿಯ ಪ್ರಾಥಮಿಕ ಮಟ್ಟದಲ್ಲಿ ವಿಜ್ಞಾನ ಕಲಿಯಲು,ಕಲಿಸಲು ನಮ್ಮ ಕೇಂದ್ರ ಉತ್ತಮವಾಗಿದೆ.ಸದಸ್ಯತ್ವ ಉಚಿತ. ಸ್ವಯಂ ಸೇವಕರಾಗಲು ಅವಕಾಶವಿದೆ.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : +919110477512**

Pratham Mysore

Every Child in School and Learning Well

ಮಾಡಿರಿ-ನೋಡಿರಿ-ಕಲಿಯಿರಿ